ಅದನ್ನು ಸೃಜನಶೀಲ ಕೃತಿಯನ್ನಾಗಿಸುವ ವೇಣು ಅವರ ಪ್ರಯತ್ನ ಗಮನ ಸೆಳೆಯುವುದು ಇಲ್ಲಿಯೇ. ಈ 'ದಂಗೆ'ಕೋರರು ತಮ್ಮ ಬಿಡುಗಡೆಗಿಂತ ಸಾಮೂಹಿಕ ಬಿಡುಗಡೆಯನ್ನು ತಮ್ಮ ಹೋರಾಟದ ಗುರಿಯನ್ನಾಗಿಸಿಕೊಂಡಿರುವುದು ಈ ಕೃತಿಯಲ್ಲಿ ಪ್ರಾಮುಖ್ಯತೆ ಪಡೆದಿದೆ. ಕಾದಂಬರಿಯಲ್ಲಿ ವಾಲ್ಮೀಕಿ ಎನ್ನುವ ಹೋರಾಟಗಾರರ ತಂಡದ ಮುಖಂಡ ಹೇಳುವ ಒಂದು ಮಾತು, 'ನಮ್ಮ ಹೋರಾಟ ರಾಜ್ಯ, ಪಟ್ಟ, ಪದವಿ, ಸಿಂಹಾಸನಕ್ಕಲ್ಲ! ದುರ್ಗವನ್ನು ಗುಲಾಮಗಿರಿಯಿಂದ ಪಾರುಮಾಡಲಿಕ್ಕೆ' (ಪು. 286) ಎಂದು ಹೇಳುತ್ತಾನೆ. ಹೀಗೆ 'ದುರ್ಗದ ಬೇಡರ್ದಂಗೆ' ಸಮುದಾಯದ ಮನಸ್ಸಿನಲ್ಲಿ ವಿಮೋಚನೆಯ ಕನಸುಗಳನ್ನು ಬಿತ್ತುವ ಕೆಲಸವನ್ನು ಮಾಡುತ್ತದೆ. ಇದು ಸ್ಥಳೀಯ ಇತಿಹಾಸದ ಹಿನ್ನೆಲೆಯಲ್ಲಿ ರಚಿತವಾದರೂ, ರಾಷ್ಟ್ರೀಯತೆಯ ಸ್ವಾತಂತ್ರ್ಯ ಹೋರಾಟದ ಸಾಗರಕ್ಕೆ ಸೇರಿದ ಪುಟ್ಟ ತೊರೆಯಾಗಿದೆ.

ವೇಣು ಅವರು ದೊಡ್ಡ ಆದರ್ಶಗಳ ಕಾದಂಬರಿಕಾರ. ತಮ್ಮ ಚಾರಿತ್ರಿಕ ಕಾದಂಬರಿಗಳಲ್ಲಿ ಜನಸಾಮಾನ್ಯರ ಬದುಕಿನ ಮೂಲಕ ಪ್ರಭುತ್ವವನ್ನು ನೋಡುವುದು ಅವರ ವೈಶಿಷ್ಟ್ಯ. ಅವರ 'ರಾಜಾ ಮತ್ತಿ ತಿಮ್ಮಣ್ಣ ನಾಯಕ' ಚಾರಿತ್ರಿಕ ಕೃತಿಯಾದರೂ, ಹೊಸಕಾಲದ ಪ್ರಜಾಸತ್ತಾತ್ಮಕವಾದ ಎಲ್ಲ ಜನಪರ ಆಶಯಗಳನ್ನು ಒಳಗೊಂಡು, ಬೀದಿಬದಿಯ ಶ್ರಮಿಕರ ಮೂಲಕ ಒಂದು ಪ್ರಭುತ್ವವನ್ನು ನೋಡಿರುವ ಕಾದಂಬರಿಯಾಗಿದೆ. ಆ ಸಾಲಿಗೆ 'ದುರ್ಗದ ಬೇಡರ್ದಂಗೆ' ಕಾದಂಬರಿಯೂ ಸೇರಿಕೊಳ್ಳುತ್ತದೆ. ಕಾದಂಬರಿಯಲ್ಲಿ ಚೈತನ್ಯ ಮತ್ತು ಉತ್ಸಾಹದ ಬುಗ್ಗೆಯಂತಿರುವ ವಾಲ್ಮೀಕಿ ಎನ್ನುವ ತರುಣ ಒಂದು ಹಂತದಲ್ಲಿ 'ದ್ವೇಷ ಮರೀಬೇಕು, ದೇಶ ಉಳಿಸಬೇಕು. ಹಿಂಗೆ ಕಿತ್ತಾಡ್ಕೊಂಡೇ ಬಸವಣ್ಣನನ್ನು ಕಳೆದುಕೊಂಡ್ವಿ' (ಪು. 255) ಎಂಬ ಮಾರ್ಮಿಕ ಮಾತೊಂದನ್ನು ಹೇಳುತ್ತಾನೆ. ಇದು ವರ್ತಮಾನಕ್ಕೂ ಸಲ್ಲುವಂತಹದ್ದಾಗಿದೆ.

ಈ ಕೃತಿ ಇತಿಹಾಸವನ್ನು ಕ್ಯಾಲೆಂಡಿರಿನಂತೆ ಓದುವ ಕೃತಿಯಲ್ಲ. ಇತಿಹಾಸವನ್ನು ಸೃಜನಶೀಲ ಕೃತಿಯನ್ನಾಗಿಸುವಲ್ಲಿ ಲೇಖಕರ ಕಲ್ಪನಾ ವಿಲಾಸ, ಘಟನೆಗಳ ನೇಯ್ಗೆ ಇವೆಲ್ಲವೂ ಹದಗೊಂಡು ಕಾದಂಬರಿಯ ಓದನ್ನು ಚೇತೋಹಾರಿಯಾಗಿ ಮಾಡಿವೆ. ರೋಚಕತೆ, ಭಾವುಕತೆ ಹಾಗೂ ಇನ್ನಿತರ 'ಜನಪ್ರಿಯತೆ'ಯ ಗುಣಗಳನ್ನು ಇಟ್ಟುಕೊಂಡೂ ವರ್ತಮಾನ ಭಾರತ ಎದುರಿಸುತ್ತಿರುವ ಅನೇಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷಗಳನ್ನು ಈ ಕಾದಂಬರಿ ಸಹಜವಾಗಿಯೇ ತನ್ನ ತೆಕ್ಕೆಯಲ್ಲಿಟ್ಟುಕೊಂಡಿದೆ.

ಚಾರಿತ್ರಿಕ ಕಾದಂಬರಿಯನ್ನು ರೋಚಕಗೊಳಿಸುವ ಬಗ್ಗೆ ವೇಣು ಅವರ ನಿಲುವು ಹೀಗಿದೆ: '... ಕಾದಂಬರಿಕಾರ ರೋಚಕ ಅಂತ್ಯವನ್ನು ನೀಡಿದ್ದರೆ ಆ ಪರಾಕ್ರಮಿಗಳ ಬಗ್ಗೆ ಓದುಗರಲ್ಲಿ ಅಭಿಮಾನ ಮೂಡಲೆಂಬ ಉದ್ದೇಶವೇ ಹೊರತು ಯಾವ ದುರುದ್ದೇಶವೂ ಲೇಖಕನಿಗೆ ಇರುವುದಿಲ್ಲ' (ರಾಜಾ ಮತ್ತಿ ತಿಮ್ಮಣ್ಣನಾಯಕ: ಲೇಖಕನ ಮಾತುಗಳು). ಜಾತಿಪದ್ಧತಿ, ಕೋಮು ವಿಭಜನೆ, ಆಹಾರದ ಬಗೆಗಿನ ತಾರತಮ್ಯ, ವೈಚಾರಿಕತೆ, ಸ್ವಾತಂತ್ರ್ಯ, ಸಮಾನತೆ, ಪುರೋಹಿತಶಾಹಿ, ಜನಸಾಮಾನ್ಯರ ಬದುಕು ಇವೆಲ್ಲವೂ ಕಾದಂಬರಿಯ ದ್ರವ್ಯದಲ್ಲಿ ಬೇರ್ಪಡಿಸಲಾಗದಂತೆ ಮಿಳಿತವಾಗಿವೆ. ಇದರ ಜೊತೆಗೆ ಶ್ರಮಜೀವಿಗಳು ಮತ್ತು ಮಹಿಳಾ ಸಮುದಾಯದ ಒಳಗಿನ ತುಡಿತಗಳನ್ನು ಈ ಕಾದಂಬರಿ ವಾಚ್ಯವಾಗದಂತೆ ಧ್ವನಿಪೂರ್ಣವಾಗಿ ಒಳಗೊಂಡಿದೆ. ಕಾದಂಬರಿಯಲ್ಲಿ ಹಾಸುಹೊಕ್ಕಾಗಿರುವ ಲಕ್ಷ್ಮಿ ಮತ್ತು ಜೇನ್ ಈ ಇಬ್ಬರು ಹೆಣ್ಣುಮಕ್ಕಳು ತೋರುವ ಸಂಯಮ, ವಿವೇಕ, ಪ್ರೇಮ ಮತ್ತು ಕಾಮಗಳನ್ನು ವ್ಯಕ್ತಪಡಿಸುವ ನವುರಾದ ಭಾವನೆಗಳು ಹಾಗೂ ಮಾನವೀಯ ಸ್ಪಂದನೆಗಳು ಮೇಲ್ಮಮಟ್ಟದ್ದಾಗಿವೆ. ಹೆಣ್ಣನ್ನು 'ಒಲವು ನಲಿವುಗಳ ಚಿಲುಮೆ' ಎಂದು ಭಾವಿಸಿರುವ ಲೇಖಕರ ಗ್ರಹಿಕೆಯ ಪ್ರಬುದ್ಧತೆ ಅರಿವಿಗೆ ಬರುವುದು ಇಲ್ಲಿಯೇ.